ಸ್ಪನ್ ಸಿಲ್ಕ್ ಬಗ್ಗೆ.

(೧೮೮) ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ರೇಷ್ಮೆ ವ್ಯವಸಾಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚನ್ನಪಟ್ಟಣ ಮತ್ತಿತರ ಕಡೆಗಳಲ್ಲಿ ತಯಾರಿಸುತ್ತಿರುವ ಸ್ಪನ್ ಸಿಲ್ಕ್‌ದಾರವನ್ನು ವಿತರಣೆ ಮಾಡಲು ಸರ್ಕಾರದವರು ಅನುಸರಿಸಂತ್ತಿರುವ ನಿಯಮಗಳೇನು ?

ಆ) ಈ ದಾರವನ್ನು ಖಾಸಗಿಯವರಿಗೆ ಬಹಳ ಕಡಿಮೆ ದರದಲ್ಲಿ ಮಾರಾಟ ಮಾಡಲಾಗುತ್ತಿದೆ ಎಂಬ ದೂರು ಸರ್ಕಾರದವರಿಗೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ. ಎಂ. ವಂಚಿಯಪ್ಪ (ರೇಷ್ಮೆ ಸಚಿವರು).—

ಅ) ಜೂಟು ರೇಷ್ಮೆ ಗಿರಣಿ, ಚನ್ನಪಟ್ಟಣ, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ಒಂದು ಘಟಕವಾಗಿದ್ದು, ಗಿರಿಣಿಯು ಉತ್ಪಾದಿಸುವ ಜೂಟು ರೇಷ್ಮೆದಾರವನ್ನು ಉತ್ತರ ಭಾರತದ ಶ್ರೀನಗರ, ಬಾಗಲ್ಪುರ, ವಾರಣಾಸಿ, ಕಲ್ಕತ್ತ, ಹಾಗೂ ಬೆಂಗಳೂರಿನ ಸ್ಥಳೀಯ ಮಾರುಕಟ್ಟೆ, ಗಳಲ್ಲಿ ಮಾರಾಟ ಮಾಡಲಾಗುವುದು. ನಿಗಮವು ರಚಿಸಿದ ಉಚ್ಚ ಮಟ್ಟದ ಅಧಿಕಾರಿಗಳ ಸಮಿತಿಯು ಜೂಟು ರೇಷ್ಮೆದಾರರವನ್ನು ಈ ಹಿಂದೆ ವಿರೀದಿಸಿದ ಹಾಗೂ ಕ್ಲಿಷ್ಟಕರವಾದ ಮಾರುಕಟ್ಟೆಯ ಪರಿಸ್ಥಿತಿಯಲ್ಲಿಯೂ ವಿರೀದಿಸಿದ ಗಿರಾಕಿಗಳ ಕಾರ್ಯ ನಿರ್ವಹಣೆಯನ್ನು ಗಣನೆಗೆ ತೆಗೆದುಕೊಂಡು ಜೂಟು ರೇಷ್ಮೆದಾರವನ್ನು ವಿತರಣೆ ಮಾಡುತ್ತದೆ. ಹಾಗೂ ಉತ್ತರಪ್ರದೇಶ, ಮಧ್ಯಪ್ರದೇಶ, ಬಿಹಾರ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಈ ಜೂಟು ರೇಷ್ಮೆಯನ್ನು ಮಾರಾಟ ಮಾಡಲು ಒಬ್ಬ ಏಜೆಂಟರನ್ನು ನಿಯಮಿಸಿದೆ.

ಆ) ಇಲ್ಲ.

ಜೂಟು ರೇಷ್ಮೆ ಗಿರಣಿ, ಚನ್ನಪಟ್ಟಣ ಇಲ್ಲಿ ತಯಾರಿಸುತ್ತಿರುವ ಜೂಟು ರೇಷ್ಮೆದಾರವನ್ನು ನಿಗಮದ ಕಮಿಟಿಯಂ ಮಾರುಕಟ್ಟೆಗಳ ವಿರಿಳಿತಗಳಿನ್ನು ಪರಿಗಣಿಸಿ ಸೂಕ್ತ ಬೆಲೆಗಳನ್ನು ನಿರ್ಧರಿಸಿದ ಬೆಲೆಗೆ ಜೂಟುದಾರವನ್ನು ಮಾರಾಟ ಮಾಡಲಾಗಂತ್ತದೆ.

ಇ) ಅನ್ವಯಿಸುವುದಿಲ್ಲ.

ಕಾಡು ಪ್ರಾಣಿಗಳಿಂದ ಉಂಟಾದ ಹಾನಿಗಳು

(೩೬೦) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭ ರಿಂದ ಡಿಸೆಂಬರ್ ಕೊನೆಯವರೆಗೆ ಮೈಸೂರು ಜಿಲ್ಲೆಯಲ್ಲಿ ಕಾಡು ಪ್ರಾಣಿಗಳಿಂದ ಉಂಟಾದ ಒಟ್ಟು ಪ್ರಾಣಹಾನಿ, ಜಾನುವಾರುಗಳ ಹಾಗೂ ಬೆಳೆ ಹಾನಿಗಳೆಷ್ಟು ?

ಆ) ಹಾನಿಗೊಳಗಾದವರ ಕುಟುಂಬದವರಿಗೆ ನೀಡಿರುವ ಪರಿಹಾರದ ಮೊತ್ತವೆಷ್ಟು ?

ಇ) ನಷ್ಟಕ್ಕೆ ಒಳಗಾಗಿ ಒಂದು ವರ್ಷವಾಗಿದ್ದರೂ ನೊಂದವರಿಗೆ ಇನ್ನೂ ಪರಿಹಾರ ನೀಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?